CC 773/2023

CW 3 – PW 2

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಚನ್ನರಾಯಪಟ್ಟಣ

**CC 773/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | ః | ದೇವರಾಜು | **C.W –3** |
| ತಂದೆಯ ಹೆಸರು | ః | ರಂಗೇಗೌಡ | **P.W –2** |
| ವಯಸ್ಸು | ః | 47 ವರ್ಷ | |
| ಉದ್ಯೋಗ | ః | ವ್ಯವಸಾಯ | **ಪ್ರಮಾಣ ವಚನ ಬೋಧಿಸಲಾಯಿತು.** |
| ವಾಸ | ః | ಬದಿಕೆರೆ | ದಿನಾಂಕಃ **23.02.2024** |

---

ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ

ಚಾ ಸಾ 2 ಮತ್ತು 4 ರವರ ಪರಿಚಯವಿದೆ.

ಸಾಕ್ಷಿಗೆ ಕೃತ್ಯ ಸ್ಥಳ ಮತ್ತು ಅಮಾನತ್ತು ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿ ಪಿ 2 ಎಂದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ ಪಿ 2(ಎ) ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ದಿನಾಂಕ 22.04.2022 ರಂದು ಹಿರಿಸಾವೆ ಹತ್ತಿರ ಇರುವ ಬಸವೇಶ್ವರ ಸರ್ಕಲ್ ನಲ್ಲಿ ಪೋಲೀಸರು ಸಂಜೆ 04.30-05.30 ಗಂಟೆ ಸಮಯದಲ್ಲಿ ಮಹಜರ್ ಕ್ರಮ ಜರುಗಿಸಿದ್ದು ಆ ಸಮಯದಲ್ಲಿ ನಾನು ನಿ ಪಿ 2 ಕ್ಕೆ ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ಚಾ ಸಾ 2 ಮತ್ತು 4 ಮತ್ತು ನಾನು ಮತ್ತು ಚಾ ಸಾ 1 ಹಾಜರಿದ್ದೆವು. ಆ ಸಮಯದಲ್ಲಿ ಪೋಲೀಸರು ಒಂದು ವಿಕ್ಟರ್ ಗಾಡಿ ಮತ್ತು ಕಾರ್ ನ ನಂಬರ್ ಪ್ಲೇಟ್ ನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಅಮಾನತ್ತುಪಡಿಸಿಕೊಂಡಿರುವ ವಾಹನ ಮತ್ತು ಕಾರಿನ ನಂಬರ್ ಪ್ಲೇಟ್ ನ ಪೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ.

***(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರ್ಕಾರಿ ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)***

**ಪಾಟೀ ಸವಾಲುಃ** ಮಾನ್ಯ ಸರ್ಕಾರಿ ಅಭಿಯೋಜಕರವರಿಂದ

ಪೋಲೀಸರು ಅಮಾನತ್ತುಪಡಿಸಿಕೊಂಡ ವಾಹನದ ಸಂಖ್ಯೆ ಕೆ ಎ *13* ಎಲ್ *3413* ವಿಕ್ಟರ್ ಮೋಟಾರ್ ಬೈಕ್ ಆಗಿರುತ್ತದೆ ಎಂದು ಸರಿ. ಕೆ ಎ *41 – 9188* ನಂಬರ್ ಪ್ಲೇಟ್ ನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು** – ಶ್ರೀ ಕೆ ಎಲ್ ಸಿ ಆರೋಪಿ ಪರ ವಕೀಲರಿಂದ

ನಾನು *9* ನೇ ತರಗತಿ ವಿದ್ಯಾಭ್ಯಾಸ ಮಾಡಿದ್ದೇನೆ. ನಾನೇ ಸ್ವತಃ ಮಹಜರ್ ಸ್ಥಳಕ್ಕೆ ಹೋಗಿರುತ್ತೇನೆ. ಮಹಜರ್ ಸ್ಥಳದಲ್ಲಿ ಒಂದು ಬೈಕ್ ಮತ್ತು ನಂಬರ್ ಪ್ಲೇಟ್ ಇತ್ತು, ಸಾಕ್ಷಿ ಮುಂದುವರೆದು ನಾನು, ಚಾ ಸಾ *2* ಮತ್ತು *4* ರವರು ನಂಬರ್ ಪ್ಲೇಟ್ ನ್ನು ಪೋಲೀಸರಿಗೆ ನೀಡಿರುತ್ತೇವೆ ಎನ್ನುತ್ತಾರೆ. ಅಪಘಾತ ಸ್ಥಳದಿಂದ ಪೋಲೀಸ್ ಠಾಣೆಗೆ *150* ಮೀಟರ್ ಅಂತರವಿದೆ. ಮಹಜರ್ ಸ್ಥಳದ ಚೆಕ್ಕುಬಂದಿ ಪೂರ್ವಕ್ಕೆ ಬೆಂಗಳೂರು ಹೈವೇ, ದಕ್ಷಿಣಕ್ಕೆ ಸರ್ವೀಸ್ ರಸ್ತೆ, ಉತ್ತರಕ್ಕೆ ಬೆಂಗಳೂರಿಗೆ ಹೋಗುವ ಹೈವೇ, ಪಶ್ಚಿಮಕ್ಕೆ ಹೈವೇ ರಸ್ತೆ. ಅಪಘಾತ ಸ್ಥಳದಿಂದ ಹೈವೇ ರಸ್ತೆಗೆ ಎಷ್ಟು ಅಂತರವಿದೆ ಎಂದು ನನಗೆ ಗೊತ್ತಿಲ್ಲ. ಅಪಘಾತ ಸ್ಥಳದಲ್ಲಿ ಹಂಪ್ಸ್ ಇದೆ ಎಂದರೆ ಸರಿ. ಬೆಂಗಳೂರಿನ ಕಡೆಯಿಂದ ಹಾಸನ ಕಡೆಗೆ ಬರುವಾಗ ಹಂಪ್ಸ್ ನ್ನು ದಾಟಿ ಬೈಕ್ ಬಿದ್ದಿತ್ತು. ಹಂಪ್ಸ್ ನಿಂದ *2* ಮಾರು ಅಂತರದಲ್ಲಿ ಬೈಕ್ ಬಿದ್ದಿತ್ತು. ಅಪಘಾತಕ್ಕೊಳಗಾದ ಬೈಕ್ ನ ಬಣ್ಣ ನೆನಪಿಲ್ಲ. ಹಳದಿ ಬಣ್ಣದ ನಂಬರ್ ಪ್ಲೇಟ್ ನ್ನು ಪೋಲೀಸರು ಅಮಾನತ್ತುಪಡಿಸಿಕೊಂಡಿರುತ್ತಾರೆ. ಕಾರ್ ಮತ್ತು ಬೈಕ್ ಸಂಖ್ಯೆ ನನಗೆ ನೆನಪಿಲ್ಲ. ಸಾಕ್ಷಿಗೆ ಅಪಘಾತಪಡಿಸಿದ ವಾಹನದ ನಂಬರ್ ಪ್ಲೇಟ್ ಇರುವ ಒಂದು ಫೋಟೋವನ್ನು ತೋರಿಸಲಾಗಿ ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ನಂಬರ್ ಪ್ಲೇಟ್ ನ್ನೇ ಪೋಲೀಸರು ಅಮಾನತ್ತುಪಡಿಸಿಕೊಂಡಿರುತ್ತಾರೆ ಎನ್ನುತ್ತಾರೆ. ಸದರಿ ಫೋಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ನಿ ಡಿ *1* ಎಂದು ಗುರುತಿಸಲಾಯಿತು. ಅಮಾನತ್ತುಪಡಿಸಿಕೊಂಡ ನಂಬರ್ ಪ್ಲೇಟ್ ನ್ನು ಪೋಲೀಸರು ತೆಗೆದುಕೊಂಡು ಹೋಗಿರುತ್ತಾರೆ. ಪೋಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ನಿ ಪಿ *2* ಕ್ಕೆ ನಾನು ಪೋಲೀಸ್

ಠಾಣೆಯಲ್ಲಿ ಸಹಿ ಮಾಡಿದ್ದೇನೆಂದರೆ ಸರಿಯಲ್ಲ. ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ .**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**Sd/-**
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.ಚನ್ನರಾಯಪಟ್ಟಣ